ದಿನಾಂಕಃ 05-03-2020 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಪಾಟೀ ಸವಾಲು ಶ್ರೀ ಹೆಚ್.ವಿ.ಆರ್. ವಕೀಲರಿಂದ 1 ಮತ್ತು 4ನೇ ಪ್ರತಿವಾದಿಗಳ ಪರವಾಗಿಃ**

ದಾವಾ ಷೆಡ್ಯೂಲ್ 12ನೇ ಸ್ವತ್ತು ದಾವಾ ಷೆಡ್ಯೂಲ್ 2ನೇ ಸ್ವತ್ತಿನ ಭಾಗಶಃ ಸ್ವತ್ತು ಎಂದರೆ ಸರಿಯಲ್ಲ. ದಿಃ 23-07-1982, ದಿಃ 13-02-1992, ದಿಃ 05-05-1994 ಹಾಗೂ ದಿಃ 16-09-1994ರ ಕ್ರಯಪತ್ರಗಳಲ್ಲಿ ಸ್ವತ್ತುಗಳನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು ನಾನು ಅವುಗಳನ್ನು ನೋಡಿಕೊಳ್ಳುತ್ತಿದ್ದ ವಿವರಗಳನ್ನು ಬರೆಸಿಲ್ಲ. ನಿಡಿ-3ರ ಪ್ರಕಾರ ನನ್ನ ಭಾಗಕ್ಕೆ ಬಂದ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ನಾರಾಯಣರಾವ್‌ರವರೇ ಬರೆಸಿದ್ದಾರೆ ಎಂದು ತಿಳಿಸಿದ್ದಾರೆ, ಅವರೇ ಬರೆಸಿದ್ದಾರೆ ಎಂದು ನಿಡಿ-3ರಲ್ಲಿ ನಮೂದಿಸಿಲ್ಲ. ನಿಡಿ-12ರಲ್ಲಿಯೂ ಸಹ ನನ್ನ ಭಾಗಕ್ಕೆ ಬಂದ ಸ್ವತ್ತನ್ನು ಮಾರಾಟ ಮಾಡುತ್ತಿದ್ದೆನೆಂದು ನಮೂದಿಸಿದ್ದೇನೆ ಎಂದರೆ ಸಾಕ್ಷಿಯು ನಾನು ಮಾರಾಟ ಮಾಡಿಲ್ಲ ಎಂದು ತಿಳಿಸಿದ್ದಾರೆ. ಮೇಲೆ ಹೇಳಿದ 4 ದಿನಾಂಕಗಳ ಪತ್ರಗಳಲ್ಲಿ ನನ್ನ ಭಾಗಕ್ಕೆ ಬಂದ ಸ್ವತ್ತುಗಳ ವಿವರಗಳನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರಗಳಲ್ಲಿ ನನ್ನ ಅಣ್ಣ ಬರೆಸಿದ್ದ ವಿವರಗಳಾಗಲಿ ನನ್ನ ತಂದೆ ಮಾರಾಟ ಮಾಡಿದ ವಿವರಗಳಾಗಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಗ್ರಾಮಲೆಕ್ಕಾಧಿಕಾರಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಬರೆದಿದ್ದಾರೆ ಎಂದು ತಿಳಿಸಿದ್ದಾರೆ. 1ನೇ ಪ್ರತಿವಾದಿಯು ಎಂದೂ ಸಹ ಕುಟುಂಬದ ಯಜಮಾನಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಅಣ್ಣನಿಗೆ ಸೇರಬೇಕಾದ ಭಾಗಂಶದ ಸ್ವತ್ತುಗಳನ್ನು ಈಗಾಗಲೇ ನೀಡಲಾಗಿದ್ದು ನಾನು ನನ್ನ ಭಾಗದ ಸ್ವತ್ತುಗಳನ್ನು ಮಾರಾಟ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ನನ್ನ ಹೆಸರಿಗೆ ಪ್ರತ್ಯೇಕ ಖಾತೆ ಮತ್ತು ಪಹಣಿ ದಾಖಲಾಗಿದೆ ಎಂದರೆ 1ನೇ ಪ್ರತಿವಾದಿ ಮಾಡಿಸಿದ್ದಾರೆ ಎಂದು ತಿಳಿಸಿದ್ದಾರೆ. ನನ್ನ ಭಾಗದ ಸ್ವತ್ತುಗಳನ್ನು

ಮಾರಾಟ ಮಾಡಿಕೊಂಡು ಉದ್ದೇಶಪೂರ್ವಕವಾಗಿ 1ನೇ ಪ್ರತಿವಾದಿಯ ಭಾಗಶ:ದ ಸ್ವತ್ತುಗಳ ಮೇಲೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಅನುಪಮ. ಡಿ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.